ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001.
ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 20-03-2015

# ಪತ್ರಿಕಾ ಪ್ರಕಟಣೆ

## ಯುಗಾದಿ ಹಬ್ಬದ ಶುಭಾಷಯ

ಬೆಂಗಳೂರು, ಮಾರ್ಚ್ 20, (ಕರ್ನಾಟಕ ವಾರ್ತೆ)

ಯುಗಾದಿ ಹಬ್ಬದ ಶುಭ ಸಂದರ್ಭದಲ್ಲಿ ಸರ್ವರ ಬಾಳಿನಲ್ಲಿ ಹೊಸ ಉತ್ಸಾಹ, ಚೈತನ್ಯ ಮತ್ತು ಯಶಸ್ಸುಗಳೊಂದಿಗೆ ಸಂತೋಷವನ್ನುಂಟು ಮಾಡಲೆಂದು ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಶ್ರೀ ಬಾಬುರಾವ್ ಚಿಂಚನಸೂರ ಅವರು "ಯುಗಾದಿ ಹಬ್ಬದ" ಹಾರ್ದಿಕ ಶುಭಾಷಯಗಳನ್ನು ತಿಳಿಸಿದ್ದಾರೆ.

## ಉಚಿತ ಕಂಪ್ಯೂಟರ್ ತರಬೇತಿ

ಬೆಂಗಳೂರು, ಮಾರ್ಚ್ 20, (ಕರ್ನಾಟಕ ವಾರ್ತೆ)

ಕೆನರಾ ಬ್ಯಾಂಕ್ ವತಿಯಿಂದ ನೆಟ್‌ವರ್ಕ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಮೂರು ತಿಂಗಳ ಪೂರ್ಣಾವಧಿ ತರಬೇತಿ ಕಾರ್ಯಕ್ರಮ ಮಾರ್ಚ್ 26 ರಿಂದ ಮತ್ತು ಕಂಪ್ಯೂಟರ್ ಆಫೀಸ್ ಅಡ್ಮಿನಿಸ್ಟ್ರೇಷನ್ (ಟ್ಯಾಲಿ)/ಡಿ.ಟಿ.ಪಿ. ಗಳಲ್ಲಿ ಮೂರು ತಿಂಗಳ ಪೂರ್ಣಾವದಿ ತರಬೇತಿ ಕಾರ್ಯಕ್ರಮ ಮಾರ್ಚ್ 27 ರಿಂದ ಪ್ರಾರಂಭವಾಗಲಿದ್ದು, ಆಸಕ್ತ, ಅರ್ಹ ನಿರುದ್ಯೋಗಿ ಯುವಕ/ಯುವತಿಯರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ. ಪಾಸಾಗಿರಬೇಕು, ಪಿ.ಯು.ಸಿ. ಪದವಿ, ಡಿಪ್ಲೊಮ, ಐ.ಟಿ.ಐ. ಹೊಂದಿರುವವರಿಗೆ ಆದ್ಯತೆ. ವಯಸ್ಸು ಕನಿಷ್ಠ 18 ವರ್ಷಗಳು, ಗರಿಷ್ಠ 27 ವರ್ಷಗಳು. ಪರಿಶಿಷ್ಟ ಜಾತಿ/ವರ್ಗ ಗರಿಷ್ಠ 30 ವರ್ಷಗಳು. ಕುಟುಂಬದ ವಾರ್ಷಿಕ ಆದಾಯ 50,000/- ರೂ. ಮೀರಿರಬಾರದು. ಅಪೇಕ್ಷೆಯುಳ್ಳವರು ಅರ್ಜಿ ಫಾರಂಗಳನ್ನು ಕೆಳಕಂಡ ವಿಳಾಸದಲ್ಲಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆನರಾಬ್ಯಾಂಕ್ ಇನ್ಸ್ಟಿಟ್ಯೂಟ್ ಆಫ್ ಇನ್‌ಫರ್‌ಮೇಷನ್ ಟೆಕ್ನಾಲಜಿ 3 ನೇ ಮಹಡಿ, ಚಿತ್ರಾಪುರ ಭವನ, 8 ನೇ

ಮುಖ್ಯ ರಸ್ತೆ, 15 ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು –560 055 ದೂರವಾಣಿ: 23440036. ಇವರಿಂದ ಪಡೆಯಬಹುದು.

## ಆರೋಗ್ಯ ಇಲಾಖೆಯಲ್ಲಿ ಬ್ಯಾಕ್‌ಲಾಗ್ ಹುದ್ದೆಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು, ಮಾರ್ಚ್ 20, (ಕರ್ನಾಟಕ ವಾರ್ತೆ)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಕಿರಿಯ ಪ್ರಯೋಗಶಾಲಾ ತಂತ್ರಜ್ಞರ ಬ್ಯಾಕ್‌ಲಾಗ್ 19 ಹುದ್ದೆಗಳು ಹಾಗೂ ನೇತ್ರ ಸಹಾಯಕರು ಬ್ಯಾಕ್‌ಲಾಗ್ 03 ಹುದ್ದೆಗಳಿಗೆ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ವೆಬ್‌ಸೈಟ್:www.karhfw.gov.in ನಲ್ಲಿ ಡೌನ್‌ಲೋಡ್ ಮಾಡಿಕೊಂಡು, ಅಧಿಸೂಚನೆಯನ್ನು ಓದಿ ಭರ್ತಿ ಮಾಡಿ, ನಿಗದಿತ ಶುಲ್ಕ ಡಿ.ಡಿ. ಯೊಂದಿಗೆ ದಿನಾಂಕ: 22–4–2015 ರೊಳಗೆ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಡಿಆರ್‌ಸಿ ವಿಭಾಗ, ಕೊಠಡಿ ಸಂಖ್ಯೆ –302 ಮೂರನೇ ಮಹಡಿ, ಐಪಿಪಿ ಕಟ್ಟಡ, ಆನಂದರಾವ್ ವೃತ್ತ, ಬೆಂಗಳೂರು –560 009. ಈ ವಿಳಾಸಕ್ಕೆ ಸಲ್ಲಿಸಲು ಪ್ರಕಟಣೆ ತಿಳಿಸಿದೆ.